# ಕರ್ನಾಟಕ ವಿಧಾನ ಪರಿಷತ್ತು

ಸದಸ್ಯರ ಹೆಸರು : ಮಾನ್ಯ ಶ್ರೀ ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ)

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ : 862

ಉತ್ತರ ದಿನಾಂಕ : 18.12.2018

| ಕ್ರ. ಸಂ: | ಪ್ರಶ್ನೆ | ಉತ್ತರಗಳು |
|---|---|---|
| ಅ) | ಕರ್ನಾಟಕ ರಾಜ್ಯದಲ್ಲಿ ನಿರ್ಮಾಣಗೊಂಡಿರುವ ಶುದ್ಧ ಕುಡಿಯುವ ನೀರಿನ ಘಟಕಗಳೆಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು) | ರಾಜ್ಯ ಗ್ರಾಮೀಣ ಪ್ರದೇಶದಲ್ಲಿ ಒಟ್ಟಾರೆ 18679 ನೀರು ಶುದ್ಧೀಕರಣ ಘಟಕಗಳನ್ನು ಅಳವಡಿಸಲು ಕ್ರಮವಹಿಸಲಾಗಿದ್ದು, ಈ ಪೈಕಿ 16240 ನೀರು ಶುದ್ಧೀಕರಣ ಘಟಕಗಳನ್ನು ಈಗಾಗಲೇ ಅಳವಡಿಸಲಾಗಿದೆ. ಅವುಗಳಲ್ಲಿ 15566 ನೀರು ಶುದ್ಧೀಕರಣ ಘಟಕಗಳನ್ನು ಕಾರ್ಯಚರಣೆಗೊಳಿಸಲಾಗಿದೆ. ಜಿಲ್ಲಾವಾರು ವಿವರವನ್ನು **ಅನುಬಂಧ-1**ರಲ್ಲಿ ಲಗತ್ತಿಸಿದೆ. |
| ಆ) | ಇದರಲ್ಲಿ ಕೆಟ್ಟು ನಿಂತಿರುವ ಘಟಕಗಳೆಷ್ಟು; ಇದಕ್ಕೆ ಕಾರಣಗಳೇನು; | ದಿನಾಂಕ:27.11.2018ರಲ್ಲಿ ಸಂಗ್ರಹಿಸಿದ ವರದಿಯನ್ವಯ 944 ನೀರು ಶುದ್ಧೀಕರಣ ಘಟಕಗಳು ತಾತ್ಕಾಲಿಕವಾಗಿ ಕಾರ್ಯನಿರ್ವಹಿಸುತ್ತಿರುವುದಿಲ್ಲ ಈ ಪೈಕಿ, 154 ಘಟಕಗಳು ಕಚ್ಚಾ ನೀರಿನ ಸಮಸ್ಯೆಯಿಂದ, 67 ಘಟಕಗಳು ವಿದ್ಯುದ್ದೀಕರಣ ಸಮಸ್ಯೆಯಿಂದ, 59 ಘಟಕಗಳು ಏಜೆನ್ಸಿ ಸಮಸ್ಯೆಯಿಂದ, 561 ಘಟಕಗಳು ಕಾರ್ಯಚರಣೆ & ನಿರ್ವಹಣೆ ಸಮಸ್ಯೆಯಿಂದ ಮತ್ತು 103 ಘಟಕಗಳು ಇತರೆ ಕಾರಣಗಳಿಂದ ಘಟಕಗಳು ತಾತ್ಕಾಲಿಕವಾಗಿ ಕಾರ್ಯನಿರ್ವಹಿಸುತ್ತಿರುವುದಿಲ್ಲ.<br>ಕಚ್ಚಾ ನೀರಿನ ಸಮಸ್ಯೆ ಇರುವ ಘಟಕಗಳಿಗೆ ತಾತ್ಕಾಲಿಕವಾಗಿ ಟ್ಯಾಂಕರ್ ಮೂಲಕ ನೀರು ಸರಬರಾಜು ಮಾಡಿ ಘಟಕಗಳನ್ನು ಸುಸ್ಥಿತಿಯಲ್ಲಿಡಲು ಸೂಚನೆ ನೀಡಲಾಗಿದೆ.<br>ವಿದ್ಯುತ್ ಸಂಪರ್ಕ ಸಮಸ್ಯೆ ಇರುವ ಘಟಕಗಳಿಗೆ ಎಸ್ಕಾಂ ಅಧಿಕಾರಿಗಳೊಂದಿಗೆ ಸಮನ್ವಯ ಸಾಧಿಸಿ, ಜರೂರಾಗಿ ಸಮಸ್ಯೆ ಬಗೆಹರಿಸಿಕೊಳ್ಳಲು ಸೂಚಿಸಲಾಗಿದೆ.<br>ಏಜೆನ್ಸಿ ಸಮಸ್ಯೆ ಇರುವ ಹಾಗೂ ಕಾರ್ಯಚರಣೆ & ನಿರ್ವಹಣೆ ಸಮಸ್ಯೆಯಿರುವ ಘಟಕಗಳಿಗೆ ಸಂಬಂಧಿಸಿದ ಏಜೆನ್ಸಿ / ಗುತ್ತಿಗೆದಾರರಿಗೆ ನೋಟಿಸ್ ನೀಡಲಾಗಿದ್ದು, ಜರೂರಾಗಿ ಘಟಕಗಳನ್ನು ಸುಸ್ಥಿತಿಯಲ್ಲಿಡಲು ಸೂಚಿಸಲಾಗಿದೆ.<br>ತಾತ್ಕಾಲಿಕವಾಗಿ ಕಾರ್ಯನಿರ್ವಹಿಸದೇ ಇರುವ ಘಟಕಗಳನ್ನು ಸುಸ್ಥಿತಿಯಲ್ಲಿಡಲು ಟಾಸ್ಕ್ ಫೋರ್ಸ್, NRDWP ಹಾಗೂ ಇತರೆ ಅನುದಾನ ಬಳಸಿಕೊಂಡು ಘಟಕಗಳನ್ನು ಸುಸ್ಥಿತಿಯಲ್ಲಿಡಲು ಸೂಚನೆ ನೀಡಲಾಗಿದೆ. ವಿಡಿಯೊ ಸಂವಾದ (VC)ದ ಮೂಲಕ ಸಂಬಂಧಿಸಿದ ಅಧಿಕಾರಿಗಳೊಂದಿಗೆ ಪ್ರಗತಿ ಪರಿಶೀಲನೆ ಮಾಡಿ, ಸಮಸ್ಯೆಗಳನ್ನು ಬಗೆಹರಿಸಿ, ಎಲ್ಲಾ ಘಟಕಗಳನ್ನು ಸುಸ್ಥಿತಿಯಲ್ಲಿಡಲು ಕ್ರಮವಹಿಸಲಾಗಿದೆ. |
| ಇ) | ಪ್ರತಿ ಗ್ರಾಮಕ್ಕೂ ಶುದ್ಧ ಕುಡಿಯುವ ನೀರಿನ ಘಟಕ ನೀಡಲು ಸರ್ಕಾರದ ನಿಲುವೇನು? | ಪ್ರತಿ ಗ್ರಾಮಗಳಿಗೆ ನೀರು ಶುದ್ಧೀಕರಣ ಘಟಕಗಳನ್ನು ಲಭ್ಯ ನೀರಿನ ಗುಣಮಟ್ಟವನ್ನು ಮನಗೊಂಡು ಜನಸಂಖ್ಯೆ ಆಧಾರದ ಮೇಲೆ ಹಾಗೂ ಅನುದಾನದ ಲಭ್ಯತೆ ಮತ್ತು ಅವಶ್ಯಕತೆಗೆ ಅನುಗುಣವಾಗಿ ಹಂತ ಹಂತವಾಗಿ ಅಳವಡಿಸಲು ಕ್ರಮವಹಿಸಲಾಗುವುದು. |

ಸಂ:ಗ್ರಾಅಪ 113 ಗ್ರಾನೀಸ(3)18

(ಕೃಷ್ಣ ಬೈರೇಗೌಡ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್
ಹಾಗೂ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು

ಅನುಬಂಧ-1

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ: (862)770ರ ಲಗತ್ತು

ರಾಜ್ಯದ ಗ್ರಾಮೀಣ ಪ್ರದೇಶಗಳಲ್ಲಿ ಅಳವಡಿಸಿರುವ ನೀರು ಶುದ್ಧೀಕರಣ ಘಟಕಗಳ ವಿವರ:

| Sno | District \ Division | No. of Plants Approved | No. of Plants Installed | No. of Plants Commissioned |
|---|---|---|---|---|
| 1 | 2 | 3 | 4 | 5 |
| 1 | Bagalkote | 810 | 765 | 764 |
| 2 | Bangalore Rural | 617 | 582 | 571 |
| 3 | Bangalore Urban | 671 | 636 | 616 |
| 5 | Belagavi division | 620 | 584 | 584 |
| 6 | Chikkodi division | 734 | 662 | 598 |
| 4 | Ballari | 855 | 742 | 742 |
| 7 | Bidar | 434 | 264 | 250 |
| 8 | C R Nagar | 213 | 133 | 106 |
| 9 | Chickballapur | 664 | 555 | 526 |
| 10 | Chikkamagalur | 231 | 163 | 161 |
| 11 | Chitradurga | 1080 | 940 | 920 |
| 14 | D Kannada | 153 | 131 | 85 |
| 12 | Davanagere | 955 | 913 | 910 |
| 13 | Dharwad | 468 | 453 | 446 |
| 15 | Gadag | 504 | 445 | 428 |
| 16 | Hassan | 457 | 424 | 364 |
| 17 | Haveri | 780 | 704 | 645 |
| 18 | Kalaburgi | 545 | 395 | 346 |
| 19 | Kodagu | 36 | 36 | 36 |
| 20 | KOLAR | 1110 | 1059 | 1036 |
| 21 | KOPPAL | 707 | 587 | 569 |
| 22 | Mandya | 770 | 602 | 564 |
| 23 | Mysuru | 660 | 564 | 547 |
| 25 | Racihur | 624 | 529 | 507 |
| 24 | Ramanagara | 534 | 440 | 411 |
| 27 | Shimoga | 331 | 209 | 209 |
| 26 | Tumkur | 1543 | 1334 | 1321 |
| 29 | U Kannada | 246 | 198 | 136 |
| 28 | Udupi | 59 | 59 | 59 |
| 30 | Vijayapura | 851 | 776 | 769 |
| 31 | Yadagiri | 417 | 356 | 340 |
| | **Grand Total :** | **18679** | **16240** | **15566** |

Executive Engineer
Rural Drinking Water & Sanitation Department
2nd Floor, 'E' Block, KHB Comp.
Cauvery Bhavan, K.G. Road, Bangalore.